**CC 1981/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 1981/2025

**ಸಿ ಡಬ್ಲೂ** -2
**ಪಿ ಡಬ್ಲೂ** -1

| | |
|---|---|
| **ಸಾಕ್ಷಿಯ ಹೆಸರು -** | **ಕೊಟ್ರೇಶ್** |
| **ತಂದೆಯ ಹೆಸರು -** | **ಭೀಮಪ್ಪ** |
| **ವಯಸ್ಸು -** | 40 **ವರ್ಷಗಳು** |
| **ಉದ್ಯೋಗ -** | **ವ್ಯವಸಾಯ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 10-07-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ 1 ವರ್ಷದ ಹಿಂದೆ ಪೋಲಿಸ್ ಠಾಣೆಯಲ್ಲಿ ಮಾಡಿದ್ದೆ. ನಿಪಿಃ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಮುದ್ದೆಮಾಲುಗಳ ಜಪ್ತು ಆಗಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ **2** ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ **3** ಎಂದು ಗುರುತಿಸಲಾಯಿತು. ನಿಪಿಃ **3** ರ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 18-02-2025 ರಂದು ಸಂಜೆ 6.00 ಗಂಟೆಗೆ ಪೋಲಿಸರು ನನ್ನನ್ನು ಮತ್ತು ಚಾಸಾ -3 ರವರನ್ನು ಗುನ್ನಾ ಸ್ಥಳವಾದ ಪಶು ಆಸ್ಪತ್ರೆಯ ಮುಂದಿನ ಸಾರ್ವಜನಿಕ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಮಟಕಾ ಜೂಜಾಟ ಆಡುತ್ತಿದ್ದ ಅಂದರೆ ಸರಿಯಲ್ಲ. ದಾಳಿ ಮಾಡಿ ಆತನನ್ನು ಹಿಡಿದು ರೂ. 1060/-, ಒಂದು ಮಟಕಾ ಪಟ್ಟಿ ಮತ್ತು ಒಂದು ಬಾಲ್ ಪನ್ ಅನ್ನು ಜಪ್ತು ಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ನಿಪಿಃ 1 ಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿಃ 1 ರ ಪಂಚನಾಮೆ ಆಗಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ ಬಿ ಪಿ ಎನ್ ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.